# ಡಾ. ಅರ್ಜುನ ಗೊಳಸಂಗಿಯವರ ಕವಿತೆಗಳಲ್ಲಿ ಹೆಣ್ಣಿನ ಭಿನ್ನ ನೆಲೆಗಳು

**ಸುಮಾ ವಸಂತ ಸಾವಂತ**

ಪ್ರಾಚಾರ್ಯರು, ಎ.ಜಿ.ಎಂ. ಪದವಿ ಮಹಾವಿದ್ಯಾಲಯ, ವರೂರ, ಧಾರವಾಡ.

**Received: 29-05-2024 ; Acepted: 03-06-2024 ; Published: 09-07-2024**

**DOI: https://doi.org/10.5281/zenodo.12672812**

**ABSTRACT:**

ಎಪ್ಪತ್ತನೆಯ ದಶಕದಲ್ಲಿ ಕನ್ನಡದಲ್ಲಿ ಆರಂಭವಾದ ದಲಿತ ಮತ್ತು ಬಂಡಾಯ ಸಾಹಿತ್ಯ ಪಂಥ ನೊಂದವರ ದನಿಯಾಗಿ ಮೂಡಿ ಬಂದವು. ಆರಂಭದಲ್ಲಿ 'ಇಕ್ರಲಾ ಒದಿರಲ' ಎಂಬಂತಹ ಆಕ್ರೋಶ ಭರಿತ ಮಾತುಗಳನ್ನು ಆಡುತ್ತಲೇ ತನ್ನ ಸುತ್ತಲಿನವರು ತನ್ನ ಮೇಲೆ ಶತಮಾನಗಳ ಕಾಲ ಮಾಡುತ್ತಾ ಬಂದ ಅನ್ಯಾಯವನ್ನು ಜಾತಿ ವ್ಯವಸ್ಥೆಯ ಹೆಸರಿನಲ್ಲಿ ಮಾಡಿದ ಶೋಷಣೆಯನ್ನೂ ವಿರೋದಿಸಲೆಂದೇ ಈ ಸಾಹಿತ್ಯ ಪಂಥಗಳು ಮೂಡಿ ಬಂದವು. ನಂತರದಲ್ಲಿ ಆಕ್ರೋಶ ತುಸು ಕಡಿಮೆಯಾದಂತೆನಿಸಿದರೂ ಅದರ ಸ್ವರೂಪ ಬದಲಾಯಿತೇ ಹೊರತು ಆಳದ ಅಕ್ರೋಶ ಹೋಗಲಿಲ್ಲ.

ದಲಿತ ಸಾಹಿತ್ಯದ ಎರಡನೆಯ ತಲೆಮಾರಿನಲ್ಲಿ ಬಂದ ಲೇಖಕರು ಆಕ್ರೋಶಕ್ಕಿಂತ ಬದುಕನ್ನು ನಿರುಮ್ಮಳವಾಗಿ ಆದರೆ ಒಂದು ಅಭಿಮಾನ ತುಂಬಿದ ದನಿಯಲ್ಲಿ ಚಿತ್ತರಿಸಿದರು. ಅವರ ಸಾಲಿನಲ್ಲಿ ಬಂದ ಪ್ರಮುಖ ಕವಿ ಡಾ. ಅರ್ಜುನ ಗೊಳಸಂಗಿಯವರು. ಕರ್ನಾಟಕ ರಾಜ್ಯ ದಲಿತ ಸಾಹಿತ್ಯ ಪರಿಷತ್ತು ಕಟ್ಟಿ ಕಳೆದ ಎರಡು ದಶಕಗಳಿಂದ ಅದರ ಅಧ್ಯಕ್ಷರೂ ಅಗಿರುವ ಅವರು ಎರಡು ಕವನ ಸಂಕಲನಗಳನ್ನು ಪ್ರಕಟಿಸಿ ದಲಿತ ಕಾವ್ಯದ ಮುಖ್ಯ ಧ್ವನಿಯಾದವರು. 'ಬುದ್ಧ ಬೆಳಕು' ಮತ್ತು 'ನನ್ನಜ್ಜಿ ನನ್ನವ್ವ ಮತ್ತು ನನ್ನಾಕೆ' ಎಂಬ ಎರಡು ಕವನ ಸಂಕಲನಗಳನ್ನು ರಚಿಸಿದ್ದಾರೆ.

**KEYWORDS:**

ದಲಿತ ಸಾಹಿತ್ಯ, ದಲಿತ ಸಾಹಿತ್ಯ ಪರಿಷತ್ತು, ಕವನ, ಹೆಣ್ಣು , ತಾಯಿ, ಹೆಂಡತಿ.

ಪ್ರತಿಯೊಬ್ಬನ ಬದುಕು ರೂಪಿತವಾದದ್ದೇ ತಾಯಿ, ಅಜ್ಜಿ , ಹೆಂಡತಿ, ಮಗಳಿಂದ. ಅಥವಾ ಅಕ್ಕ-ತಂಗಿಯರಿಂದ ಎನ್ನುವ ಸತ್ಯವನ್ನು ಸೂಚಿಸುತ್ತಿರುವರೇನೋ ಎನ್ನುವಂತೆ ಅವರ ಎರಡನೆಯ ಸಂಕಲನದ ಅರ್ಪಣೆಯನ್ನು ಅವರು ತಮ್ಮ ಬದುಕನ್ನು ರೂಪಿಸಿದ ಸ್ತ್ರೀಯರಿಗೆ ಮಾಡಿದ್ದಾರೆ. ಈ ಸಾಲುಗಳು ಹೀಗಿವೆ:

**ಶತಾಯುಷಿಯಾಗಿ**
**ಅಗಲಿದ ನಮ್ಮಜ್ಜಿ**
**ದುಂಡವ್ವಗೆ**
**ಹೊತ್ತು ಹೆತ್ತು ಹಾಡು**
**ಬದುಕಿನ ಪಾಡು**
**ಕಲಿಸಿದ ಅವ್ವ**

**ಮಲಕವ್ವಗೆ**
**ಬಾಳ ದೋಣಿಯ**
**ಹುಟ್ಟು ಹಕುತ್ತಿರುವ ನನ್ನಾಕೆ**
**ಮಲ್ಲಿಕಾಳಿಗೆ**

ಈ ಅರ್ಪಣೆಯ ಸಾಲುಗಳೇ ಸಾಕು ಅವರ ಬದುಕಿಗೆ ಕಾವ್ಯಕ್ಕೆ ಸ್ತ್ರೀ ಎಲ್ಲ ರೀತಿಯ ಆಧಾರವನ್ನು ಕಲ್ಪಿಸಿಕೊಟ್ಟವಳು ಎಂಬುದನ್ನು ಸಾರಲು.

ಡಾ. ಅರ್ಜುನ ಗೊಳಸಂಗಿಯವರ ಮೊದಲ ಕವನ ಸಂಕಲನದಲ್ಲಿ 'ಸ್ತ್ರೀ ಸಂವೇದನೆ' ಪ್ರೀತಿಯ ರೂಪದಲ್ಲಿ, ತಾಯಿಯ ಅಭಿಮಾನದ ರೂಪದಲ್ಲಿ ಮೂಡಿದೆ. ಹಳ್ಳಿಗಾಡಿನಲ್ಲಿ ಹುಟ್ಟಿ ಬಡತನದ ಬದುಕಿನಲ್ಲಿ ಅತ್ಯಂತ ಶ್ರಮ ಪಟ್ಟು ವಿದ್ಯೆಗಳಿಸಿದ ಕವಿಗೆ ತಾಯಿ ಎಲ್ಲ ರೀತಿಯಿಂದಲೂ ಮಾರ್ಗದರ್ಶನ ಮಾಡಿದವಳು. ನವೋದಯ ಕಾವ್ಯ ಅವ್ವನನ್ನು ದೇವರೆಂದು ಕಂಡರೆ ಅವಳನ್ನೊಬ್ಬ ಶ್ರಮ ಜೀವಿಯಾಗಿ ಕಂಡದ್ದು ನವೋದಯ ನಂತರದ ಕಾವ್ಯ. 'ಲಂಕೇಶರ ನನ್ನವ್ವ ಫಲವತ್ತಾದ ಕಪ್ಪು ನೆಲ' ಎನ್ನುವ ರೂಪಕ ಬಹುತೇಕ ಕವಿಗಳಿಗೆ ಮಾರ್ಗವೇ ಅಯಿತು. ಶ್ರಮ ಸಂಸ್ಕೃತಿಯ ಪ್ರತಿನಿಧಿಯಾದ ಹಳ್ಳಿಗಾಡಿನ ತಾಯಿ ಮಕ್ಕಳನ್ನು ಮಾತ್ರವಲ್ಲ ಗಂಡನನ್ನು ಪೋಷಿಸುವ ಚಿತ್ರಗಳು ಎಲ್ಲೆಂದರಲ್ಲಿ ಸಿಗುತ್ತವೆ. ಇದು ಡಾ. ಅರ್ಜುನ ಗೊಳಸಂಗಿಯವರ ಕಾವ್ಯದಲ್ಲಿಯೂ ಕಾಣುತ್ತದೆ. ಅವ್ವ ಬಾಳು ಕಲಿಸಿದವಳು. ಮಾತ್ರವಲ್ಲ ಆದರ್ಶದ ಬಾಳು ಬಾಳಲು ಹೇಳಿಕೊಟ್ಟವಳು.

**ಮಾಂಸದ ಮುದ್ದೆಯಾದ ನಾ**
**ಒದ್ದು ಬಿದ್ದರೂ ಎತ್ತಿ ಮುದ್ದಿಸಿ**
**ತಿದ್ದಿತೀಡಿ ಬೆಳೆಸಿದವಳು**

ಬಡತನದ ನಡುವೆಯೂ ಅಲ್ಲಿ ಸಂತೋಷಕ್ಕೆನೂ ಕೊರತರೆಯಿರಲಿಲ್ಲ. ಇರುವ ಕೊರತೆಗಳನ್ನೇ ಸಂತಸದ ಘಳಿಗೆಗಳನ್ನಾಗಿ ಚಿತ್ರಿಸಿದ ತಾಯಿ:

**ಹರಿದಚೆಡ್ಡಿಗೆ ಸಣ್ಣ**
**ಬಣ್ಣದ ಬಟೆ ಹಚ್ಚಿ**
**ನಾನಾ ಚಿತ್ತಾರ ಬಿಡಿಸಿದವಳು**

ಎನ್ನುವ ಸಾಲು ಅವಳ ಕೌಶಲ್ಯಕ್ಕೆ ಸಾಕ್ಷಿಯಾಗಿದೆ. ದಲಿತ ಮಹಿಳೆಯಲ್ಲಿ ಅಡಗಿದ್ದ ಕಲಾ ಕೌಶಲ್ಯವನ್ನು ಕವಿ ಇಲ್ಲಿ ಎತ್ತಿ ತೋರುತ್ತಾರೆ. ತಾಯಿ ಬಡತನದ ಬದುಕಿನಲ್ಲಿ ಕವಿಗೆ ಆತ್ಮ ವಿಶ್ವಾಸ ತುಂಬಿ ಬಾಳುವದನ್ನು ಹೇಳಿಕೊಟ್ಟುದನ್ನು ಕಾಣಿಸುವ ಕವಿ:

**ಸಾಲಿ ಕಲಿಯದ ನನ್ನವ್ವ**
**ಸಾವಿರದ ಜನಪದ ಹಾಡು ಹಾಡುತ್ತ**
**ತಾನು ಕುರುಪಿಯಿಂದ ನೆಲ ಬರೆಯುತ್ತ**
**ನನ್ನ ಅಕ್ಷರ ಲೋಕಕ್ಕೆ ಪರಿಚಯಿಸಿದವಳು**

ತಾಯಿಯಿಂದಲೇ ತಾನು ಅಕ್ಷರಲೋಕಕ್ಕೆ ಬರುವಂತಾಯಿತು ಎನ್ನುವ ಚಿತ್ರ ನೀಡುತ್ತಾರೆ. ಅವ್ವ ಅವರ ಕವಿತೆಗಳಲ್ಲಿ ಮತ್ತೆ ಎದುರಾಗುತ್ತಳೆ. ಎರಡನೆಯ ಸಂಕಲನದ

ಹೆಸರೇ 'ನಮ್ಮಜ್ಜಿ ನಮ್ಮವ್ವ ನನ್ನಕೆ' ಎಂಬ ಶೀರ್ಷಿಕೆ ಹೊಂದಿದ್ದು ಸ್ತ್ರೀಯ ನಾನಾ ಚಿತ್ರಗಳನ್ನು ನೀಡುತ್ತದೆ. ನಮ್ಮ ಸಂಸ್ಕೃತಿ ತಲೆಮಾರಿನಿಂದ ತಲೆಮಾರಿಗೆ ಕಡಿಮೆಯಾಗುವದನ್ನು ಹೇಳುತ್ತಲೇ ಅಂದರೆ ಅಂದಿಗೂ ಇಂದಿಗೂ ಸ್ತ್ರೀ ಬಾಳಿನಾಧಾರ ಶಕ್ತಿಯಾಗಿರುವದನ್ನು ಸಾರುತ್ತಾರೆ. ಹಳ್ಳಿಗಾಡಿನ ತಾಯಿ ದುಡಿಯುವ ಜೀವ ಅವಳು ಗಂಡನೊಂದಿಗೆ ಸಮನಾಗಿ ದುಡಿಯುವ ಶ್ರಮಜೀವ ಎನ್ನುವದು ಅವರ ಕವಿತೆಗಳಲ್ಲಿ ಚಿತ್ರಿತವಾಗಿದೆ.

**ಶಂಭೋಚಿಲುಮಿತುಂಬೋ ಎನ್ನುವ**
**ನಮ್ಮಪ್ಪನೊಂದಿಗೆ ಸಂಸಾರದ ನೊಗ ಹೊತ್ತು**
**ಎಳೆದು ನಮ್ಮನ್ನೆಲ್ಲ ಸಾಕಿದವಳು**
**ಕೆರೆ ಭಾವಿಯ ತೋಡಿ,ಒಡ್ಡು ದಾರಿಯ ಒಗೆದು**
**ದಡಿಸೀರೆಯನುಟ್ಟು**

ಈ ವಿವರಗಳು ಅವಳ ಶ್ರಮದ ಬದುಕಿನ ಚಿತ್ರಣ ನೀಡುತ್ತವೆ. ಕನ್ನಡದ ಕವಿಗಳು ಸಾಮನ್ಯವಾಗಿ ಕಂಡ ಅವ್ವನ ಚಿತ್ರ ತುಸು ಹೆಚ್ಚು ಕಡಿಮೆ ಇದೆ ದಾಟಿಯಲ್ಲಿದೆ. ಅವಳ ಆದರ್ಶ ಚಿತ್ರವನ್ನು ಎಲ್ಲ ಕವಿಗಳು ಚಿತ್ರಿಸುತ್ತಾರೆ.

ಡಾ. ಗೊಳಸಂಗಿಯವರ ಕವಿತೆಗಳಲ್ಲಿ ಪ್ರೀತಿಯವಳ ಚಿತ್ರಗಳು ಸಿಗುತ್ತವೆ. ನಲ್ಲೆಯಾಗಿ ಹೆಂಡತಿಯಾಗಿ ಅವಳು ಅಲ್ಲಿ ಬರುತ್ತಾಳೆ. "ನುಡಿದೀಪ ಹಚ್ಚಿ ಬೆಳಗೋಣ ಬಾನ ಬಾಳದೀಪ" ಎಂದು ಕರೆಕೊಡುತ್ತಾರೆ. ಆರಂಭದಲ್ಲಿ ಕೃಷ್ಣ ಕುವರಿಯಾಗಿ ಅರಳಿನಿಂತ ದುಂಡು ಮಲ್ಲಿಗೆಯ ಮುಖದವಳು ಈಗ ಏಕೋ ಅರ್ಥವಾಗುವುದೇ ಇಲ್ಲ ಎನ್ನುವ ತಕರಾರು ಎತ್ತುತ್ತಾರೆ. ಬಾಳು ಅವಳನ್ನು ಒರಟು ಮಾಡಿದಂತಿದೆ.

**ಮುಟ್ಟಿ ಮುತ್ತಿಟ್ಟರೆ ಕರ್ಪೂರದ ಗೊಂಬೆಯಂತಿದ್ದವಳು**
**ಈಗ ಒರಟಾದ ಕಲ್ಲಿನ ಮೂರ್ತಿ**

ಎನ್ನುವಲ್ಲಿ ಇಂಥದೊಂದು ಸೂಚನೆಯಿದೆ. ಮಾತಿಲ್ಲದ ಅವಳನ್ನು ಮೌನ ಮಲ್ಲಿಗೆ ಎನ್ನುವ ಕವಿ "ಮೌನ ಮುರಿದು ಮಾತನಾಡು" ಎಂದು ಕೇಳಿಕೊಳ್ಳುವದಿದೆ. ಬಯಲು ಸೀಮೆಯ ಬೆಡಗಿಯರ ಚಿತ್ರವನ್ನೂ ಅವರ ಒಂದು ಕವಿತೆ ನೀಡಿದೆ. ಅವರು ನಿಜದಲ್ಲಿ ಇರುವ ಸ್ಥಿತಿಯನ್ನು:

**ಇವರಲ್ಲಗೋಸುಂಬೆಯತರ**
**ನುಡಿದಂತೆ ನಡೆವ, ನಡೆದಂತೆ ನುಡಿವ**
**ಕೃಷ್ಣ ಕನ್ಯೆಯರು ನೆಚ್ಚಿನ ಮನದನ್ನೆಯರು**
**ಬಾಳದೋಣಿಯಲ್ಲಿ ಕಿರಿಬೆರಳು ಹಿಡಿದು**
**ಕೊಸರಗೊಳ್ಳದಂತೆ ಸಂಸಾರ ಸಾಗರ ತೀರ?**
**ಸೇರುವವರು, ಊಸರವಳ್ಳಿಯಾದರೆ**
**ಕಾದು ನೋಡಿ ಘೋರಿ ತೋಡಿ**
**ಚರಮಗೀತೆ ಹಾಡುವವರು**

ಬಯಲ ಸೀಮೇ ಹೆಣ್ಣು ಮಕ್ಕಳ ಆತ್ಮವಿಶ್ವಾಸ ಮತ್ತು ಅಭಿಮಾನವನ್ನು ಕವಿತೆ ಕಂಡಿದೆ. ಅವರ ಧೈರ್ಯವನ್ನೂ ಕವಿತೆಯಲ್ಲಿ ಕವಿ ಕಾಣುತ್ತಾನೆ. ಅವರು ಒಳ್ಳೆಯವರಿಗೆ

ಒಳ್ಳೆಯವರು ಕೆಟ್ಟವರಿಗೆ ಬರೀ ಕೆಟ್ಟವರಲ್ಲ. ಅವರನ್ನು ಗತಿಕಾಣಿಸುವ ವೀರ ವನಿತೆಯರು ಎಂದು ಚಿತ್ರಿಸಿರುವದು ವಿಶೇಷವಾಗಿದೆ.

ಬುದ್ಧ ಬೆಳಕು ಸಂಕಲನದ 'ನನ್ನ ನಿನ್ನ ನಡುವೆ' ಎನ್ನುವ ಕವಿತೆ:

**ಎಷ್ಟೊಂದು ವಿಷಯಗಳಿವೆ**
**ನನ್ನ ನಿನ್ನ ನಡುವೆ**
**ಎದುರು ಬದುರು ಕುಳಿತು ಮಾತನಾಡಲು**
**ತಾಸು ದಿನ ತಿಂಗಳು ವರ್ಷಗಳು ಸಾಲುವದಿಲ್ಲ**
**ಯಾಕೆಂದರೆ ಮಾತು ಮುಗಿಯುವದಿಲ್ಲ**

ಎನ್ನುವ ಕವಿತೆಯ ಸಾಲುಗಳು ಬರುತ್ತವೆ. ಕವಿ ತನ್ನವಳನ್ನು ಕುರಿತು ತನ್ನೆಲ್ಲ ನೋವುಗಳನ್ನು ಅವಳ ಮುಂದೆ ಹೇಳಲು ಪ್ರಯತ್ನಿಸುವ ಈ ಸಾಲುಗಳು ಜೀವನವೆಂದರೆ ಅವಳೊಡನೆ ಹಂಚಿಕೊಳ್ಳುವ ನೋವು ನಲಿವು ಎಂಬುದು ಸ್ಪಷ್ಟವಾಗಿದೆ.

ಎರಡನೆಯ ಕವನ ಸಂಕಲನದಲ್ಲಿ 'ನಮ್ಮಜ್ಜಿ ನಮ್ಮವ್ವ ನನ್ನಾಕೆ' ಕವಿತೆಯಲ್ಲಿ ಸ್ತ್ರೀಯ ಮೌಲ್ಯ ಮತ್ತು ನಂಬಿಗೆಗಳು ತಲೆಮಾರಿನಿಂದ ತಲೆಮಾರಿಗೆ ಪಲ್ಲಟಗೊಂಡಿರುವ ಚಿತ್ರಣವಿದೆ. ಆದರೆ ಸ್ತ್ರೀಯ ಪ್ರಾಧಾನ್ಯ ಕಡಿಮೆಯಾಗಿಲ್ಲ. ಆಹಾರ, ಉಡುವಿಕೆ, ತೊಡುವಿಕೆ, ಇರುವಿಕೆ ಮತ್ತು ಮನಸ್ಸಿನ ಸ್ಥಿತಿ ಎಲ್ಲವು ಬದಲಾಗಿರುದನ್ನು ಕವಿತೆ ಧ್ಯಾನಿಸಿದೆ.

**ನಮ್ಮಜ್ಜಿ ಮಾಡುತ್ತಿದ್ದ**
**ಪುಂಡಿ ಪಲ್ಲೆದರೊಟ್ಟಿ ಹುಳ್ಳಿ ಹುಳ್ಳಾನುಚ್ಚ**
**ನಮ್ಮವ್ವಗೆ ಬಾರವು**
**ನಮ್ಮವ್ವ ಮಾಡುತ್ತಿದ್ದ**
**ಬಿಳಿಜೋಳ ಚಜ್ಜಿ-ಗೊಂಜಾಳ ರೊಟ್ಟಿದಪಾಟಿ**
**ಹೀರಿ-ಬದನಿ-ತೊಂಡಿಕಾಯಿಚಟ್ನಿ**
**ನನ್ನಾಕೆ ಗೆ ಬಾರವು**
**ಇವಳು ಬ್ರೆಡ್ಡು -ಬಿಸ್ಕಿಟು ಅನ್ನ ಸಾರಿನವಳು**

ಹೀಗೆ ಕವಿತೆ ತಲೆಮಾರುಗಳಲ್ಲಾಗಿರುವ ಅಂತರವನ್ನು ಸಾರಿದೆ. ಜೊತೆಗೆ ಇದು ಅಂತಿಮವಾಗಿ ಮನಸ್ಸಿನ ಮೇಲೂ ಪರಿಣಾಮವಾಗಿ ಅವರಲ್ಲಿರುವ ತಾಳ್ಮೆ ಸಹನೆಗಳು ಈ ತಲೆಮಾರಿಗಿರದಿದ್ದರೂ ಪ್ರೀತಿಗೆ ಮಾತ್ರ ಕೊರತೆಯಾಗಿಲ್ಲ ಎನ್ನುವದನ್ನು ಹೇಳುವದು ಮಹತ್ವದ್ದಾಗಿದೆ.

**ಆದರೂ**
**ಎಂದರೆ ಬಿದ್ದು ಸಾಯುತ್ತಾಳೆ**
**ಬಾಳದೋಣಿಯ ಹುಟ್ಟು ಹಾಕುತ್ತಿದ್ದಾಳೆ**
**ಜೀವನದಿ ಈಜಲು ದಡ ಸೇರಲು**

ಇಲ್ಲಿ ಅಜ್ಜಿ-ಅವ್ವರು ಹೇಗೆ ಬಾಳ ದಡಕ್ಕೆ ಹುಟ್ಟು ಹಾಕಿದ ನಾಯಕರೋ ಹಾಗೆಯೇ ಕವಿಯ ಒಡತಿಯೂ ಅದೇ ಕಾರ್ಯವನ್ನು ಕಿಂಚಿತ್ತೂ ಕೊರತೆಯಿಲ್ಲದೇ ಮಾಡುತ್ತಿರುವದನ್ನು ಕವಿ ಗುರುತಿಸಿರುವದು. ಆಳದಲ್ಲಿನ ಕೃತಜ್ಞತೆ ಕಡಿಮೆಯಾಗದಿರುವದಕ್ಕೆ ಸಾಕ್ಷಿಯಾಗಿದೆ.

ಮೊದಲ ಸಂಕಲನದಲ್ಲಿಯು ಅವ್ವನನ್ನು ನೆನದಿದ್ದ ಕವಿ ಈ ಸಂಕಲನದಲ್ಲಿಯೂ ನೆನಯುತ್ತಾರೆ. ತ್ರಿಪದಿ ರೂಪದಲ್ಲಿ ಅವಳನ್ನು ಬಣ್ಣಿಸುತ್ತ:

**ಹೆತ್ತ ತಾಯಿಯ ಮುಂದ ಹತ್ತ ದೇವರು ಕಲ್ಲ**
**ಹೆತ್ತಮ್ಮ ನನ್ನ ದೇವರು / ಅಂದರ**
**ಹರಕಿ ಕೊಟ್ಟಾಳೊ ನೂರಾರೋ**

ಹೀಗೆ ತಾಯಿಯನ್ನೂ ನೆನೆಯುವ ಕವಿ ನಲ್ಲೆಯನ್ನೂ ನೆನಯುವದನ್ನು ಬಿಡುವದಿಲ್ಲ.

**ಹತ್ತಿಯ ಹೊಲದಾಗ ನಿಂತ ನೋಡವಳ್ಯಾರ**
**ಅತ್ತೆವ್ವ ಹೌದೇನ ನಿನ ಮಗಳು / ಚಲುವಿಗಿ**
**ಚಿತ್ತವಿಲ್ಲೆನ ನನ ಕಡಿಗಿ**

ಎಂದು ಪ್ರೇಮದ ಸಂವಾದವನ್ನೂ ಮಾಡುತ್ತವೆ. ಬಿಟ್ಟು ಹೋದ ನೆನಪಿನ ವಿರಹವು ನೆನಪಾಗಿ ಕಾಡಿದೆ. ಜಾನಪದ ಶೈಲಿಯಲ್ಲಿ ಅನೇಕ ಹಾಡುಗಳು ಸ್ತ್ರೀ ಸೌಂದರ್ಯವನ್ನು ಬಣ್ಣಿಸುತ್ತವೆ. ಆದರೆ ಹಳ್ಳಿಗಾಡಿನಲ್ಲಿ ನಡೆಯುವ ಬಾಲ್ಯದ ಮದುವೆಗಳ ಚಿತ್ರಣ ತೊಟ್ಟಿಲ ತಾಳಿ ಕವಿತೆಯಲ್ಲಿದೆ. ಬಾಲ್ಯದಲ್ಲಿ ತೊಟ್ಟಿಲಕ್ಕೆ ತಾಳಿ ಕಟ್ಟಿದ ಹಿರಿಯರು ಅವಳ ದುರಂತ ಬದುಕಿಗೆ ಬೀಜ ನೆಡುತ್ತಾರೆ. ಅವಳು ಯೌವನಕ್ಕೆ ಬರುವ ಹೊತ್ತಿಗೆ ಗಂಡ ಹಾವು ಕಚ್ಚಿ ಸತ್ತು ವಿಧವೆಯಾದ ಆಕೆ ಕಾಮುಕರ ಕಣ್ಣಿಗೆ ತುತ್ತಾಗುವ ಆಕೆ:

**ಸಾವಿರ ಕನಸನು ಕಟ್ಟಿಹೆನು**
**ನಾ ವಿಧವೆಯ ಪಟ್ಟಏರಿಹೆನು**

ಎಂದು ದುಃಖಿಸುವ ಆಕೆ ಸಂತೋಷದಿಂದ ವಂಚಿತಳಾಗಿ ಕೊರಗುತ್ತಿದ್ದಳೆ. ಆದ್ದರಿಂದಲೇ:

**ನಿಂತಿರೋ ಸಾಲು ಮರಗಳ ಬಳ್ಳಿಗಳೇ**
**ಮೇಲೆ ಅಲೆಯುತಿರುವ ಮೋಡಗಳೇ**
**ನೀವು ಕೇಳ್ರೆನ್ನ ಕೊರಗನ್ನ**
**ಕೊಡಿಸಿರೆನ್ನ ಸೌಭಾಗ್ಯವನ್ನ**

ಎಂದು ಕೇಳಿವದು. ಹೆಣ್ಣೊಂದರ ನೋವಿನ ಚಿತ್ರವಾಗಿದೆ. ಇಡೀ ಆಧುನಿಕ ಕಾವ್ಯಲೋಕದಲ್ಲಿ ವಿಭಿನ್ನವಾದ ಪದ್ಯಗಳನ್ನು ಡಾ. ಅರ್ಜುನ ಗೊಳಸಂಗಿಯವರು ಗೇಯ ಗೀತಗಳಾಗಿಸಿದ್ದಾರೆ. ಕನ್ನಡಾಂಬೆ, ಭಾರತಾಂಬೆ ಎಂಬ ದೇಶಗೀತೆಗಳು ಅವುಗಳನ್ನು ಹೆಣ್ಣಾಗಿ ಕಂಡು ಗೌರವಿಸಿವೆ. ಒಟ್ಟಾರೆ ಗೊಳಸಂಗಿಯವರು ಹೆಣ್ಣಿನ ಭಿನ್ನ ಚಿತ್ರಗಳನ್ನು ನೀಡುವಲ್ಲಿ ಯಶಸ್ವಿಯಾಗಿದ್ದಾರೆ.

**ಆಕರ ಗ್ರಂಥಗಳು:**

1. ಅರ್ಜುನ ಗೊಳಸಂಗಿ. (2011). ಬುದ್ಧ ಬೆಳಕು. ದಲಿತ ಸಾಹಿತ್ಯ ಪರಿಷತ್ತು. ಗದಗ.
2. ಅರ್ಜುನ ಗೊಳಸಂಗಿ. (2011). ನಮ್ಮಜ್ಜಿ ನಮ್ಮವ್ ನನಾಕೆ. ದಲಿತ ಸಾಹಿತ್ಯ ಪರಿಷತ್ತು. ಗದಗ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.